# ಅಗ್ನಿಶಾಮಕ ಇಲಾಖೆ 1567 ಹುದ್ದೆ ಭರ್ತಿ

**ಬೆಂಗಳೂರು:** ಅಗ್ನಿಶಾಮಕ ಇಲಾಖೆಯಲ್ಲಿ ಖಾಲಿ ಇರುವ 1567 ಹುದ್ದೆಗಳನ್ನು 100 ದಿನಗಳಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಇಲಾಖೆಯ ಅಧಿಕಾರಿಗಳಿಗೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ. ಗುರುವಾರ ಬೆಂಗಳೂರಿನಲ್ಲಿ ಅಗ್ನಿಶಾಮಕ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಅವರು, 1222 ಅಗ್ನಿಶಾಮಕ, 227 ಅಗ್ನಿಶಾಮಕ ಚಾಲಕ, 82 ತಂತ್ರಜ್ಞ ಹಾಗೂ 36 ಠಾಣಾಧಿಕಾರಿ ಹುದ್ದೆ ಭರ್ತಿ ಮಾಡುವಂತೆ ಅಗ್ನಿಶಾಮಕ ಇಲಾಖೆ ಡಿಜಿಪಿ ಅವರಿಗೆ ತಿಳಿಸಿದರು. ಪುಟ 6

# ಅಗ್ನಿಶಾಮಕ 1567 ಹುದ್ದೆ ಭರ್ತಿ

ಮೊದಲನೇ ಪುಟದಿಂದ...

ರಾಜ್ಯದ 50 ಅಗ್ನಿಶಾಮಕ ಠಾಣೆಗಳಲ್ಲಿ ವಸತಿ ಗೃಹಗಳು ಇಲ್ಲದೇ ಇರುವುದರಿಂದ ಸಿಬ್ಬಂದಿಗೆ ಸಮಸ್ಯೆಯಾಗಿದೆ. ಕೂಡಲೆ ಇಲ್ಲಿ ವಸತಿ ಗೃಹಗಳನ್ನು ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಪೊಲೀಸರಿಗಿರುವ ಕ್ಯಾಂಟೀನ್ ಸೌಲಭ್ಯವನ್ನು ಅಗ್ನಿಶಾಮಕ ಸಿಬ್ಬಂದಿಗೂ ವಿಸ್ತರಣೆ ಮಾಡುವಂತೆಯೂ ಸಚಿವರು ಆದೇಶಿಸಿದರು. ಔರಾದ್ಕರ್ ವರದಿಯನ್ವಯ ಪೊಲೀಸರಿಗೆ ನೀಡುವ ಮಾದರಿಯಲ್ಲಿಯೇ ಕಷ್ಟ ಪರಿಹಾರ ಭತ್ಯೆಯನ್ನು ಅಗ್ನಿಶಾಮಕ ಸಿಬ್ಬಂದಿಗೂ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು. ಕೆ.ಸೇಫ್ 1 ಯೋಜನೆಯಲ್ಲಿ ಅನುದಾನದ ಬಳಕೆಗೆ ಸಂಬಂಧಿಸಿದಂತೆ ವರದಿ ನೀಡಲು ಹಾಗೂ ಉಳಿದ ಮೊತ್ತವನ್ನು ಡಿಸೆಂಬರ್ ಅಂತ್ಯದೊಳಗೆ ಬಳಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಡಿಜಿಪಿ ಅವರಿಗೆ ಬೊಮ್ಮಾಯಿ ತಿಳಿಸಿದರು. ಎಸ್‌ಡಿಆರ್‌ಎಫ್‌ಗೆ ಆಧುನಿಕ ಉಪಕರಣಗಳನ್ನು ಖರೀದಿ ಮಾಡುವ ಮೂಲಕ ಮುಂದಿನ ಮಳೆಗಾಲ ಎದುರಿಸಲು ಸಜ್ಜಾಗುವಂತೆ ತಿಳಿಸಲಾಯಿತು. ಎಲ್ಲ ಗೃಹ ರಕ್ಷಕ ಸಿಬ್ಬಂದಿಗೂ ಆಯುಷ್ಮಾನ್ ಭಾರತ್ ಯೋಜನೆ ವಿಸ್ತರಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು. ರಾಜ್ಯದ ಎಲ್ಲ ಪೊಲೀಸ್ ವಲಯ ಕಚೇರಿಗಳಲ್ಲಿ ಪೌರ ರಕ್ಷಣಾ ಘಟಕಗಳನ್ನು ತೆರೆಯಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.